ವಿಷಯ: ಕೃಷಿ ಮಾರುಕಟ್ಟೆಯಡಿ ನಿರ್ಮಿತ ರಸ್ತೆಗಳು

2631 (3287)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಮಾರುಕಟ್ಟೆ ಸಮಿತಿಯ ವತಿಯಿಂದ ನಿರ್ಮಿತ ರಸ್ತೆಗಳು ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಳಪೆ ಕಾಮಗಾರಿಗಳಿಗೆ ಸೂಕ್ತ ತಜ್ಞರ ಅಭಾವವೂ ಒಂದು ಕಾರಣವೆಂಬುದು ಗಮನಕ್ಕೆ ಬಂದಿದೆಯೇ?

ಇ) ಕಳಪೆ ಕಾಮಗಾರಿಗಳು ಆಗದಂತೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಈಗಾಗಲೇ ಅನುಸೂಚಿಯಲ್ಲಿಯ ಸ್ಪೆಸಿಫಿಕೇಷನ್ ಪ್ರಕಾರ ಕೆಲಸವನ್ನು ನಿರ್ವಹಿಸಲು ಸಂಬಂಧಪಟ್ಟ ಅಭಿಯಂತರುಗಳಿಗೆ ಸೂಚನೆ ನೀಡಲಾಗಿದೆ.

ವಿಷಯ: ಮುಜರಾಯಿ ದೇವಸ್ಥಾನಗಳಿಗೆ ಸಹಾಯಧನ

2632 (3286)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಮುಜರಾಯಿ ದೇವಸ್ಥಾನಗಳಿಗೆ ಸಹಾಯಧನ ನೀಡಲು ಆಯವ್ಯಯದಲ್ಲಿ ನಿಗಧಿಯಾದ ಮೊತ್ತವೆಷ್ಟು?

ಆ) ವ್ಯಯಿಸಿದ ಮೊತ್ತವೆಷ್ಟು? ಜಿಲ್ಲಾವಾರು ನೀಡಲಾದ ಮೊತ್ತವೆಷ್ಟು?

ಇ) ಉತ್ತರ ಕನ್ನಡ ಜಿಲ್ಲೆಗೆ ಪೂರೈಸಿದ ಮೊತ್ತವೆಷ್ಟು? (ವಿಧಾನ ಸಭಾ ಕ್ಷೇತ್ರದ ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):